ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ನಾನು ಈ ಕೆಳಕಂಡ ಹೇಳಿಕೆಯನ್ನು ಮಾಡುತ್ತೇನೆ. ಮಾನ್ಯ ಅಧ್ಯಕ್ಷರೇ ಈ ದೇಶದ ಖ್ಯಾತ ಸ್ವಾತಂತ್ರ್ಯ ಹೋರಾಟಗಾರರು ಮಹಾತ್ಮಗಾಂಧಿಯವರ ಅನುಯಾಯಿಗಳು ಹಾಗೂ ಜವಹರ್‌ಲಾಲ್ ಬಜಾಜ್ ಪ್ರಶಸ್ತಿ ವಿಜೇತರಾದ ಶ್ರೀ ತಗಡೂರು ರಾಮಚಂದ್ರರಾಯರ ಬಗ್ಗೆ ಒಂದು ಸಾಕ್ಷ ಚಿತ್ರವನ್ನು ನಿರ್ಮಿಸುವ ಬಗ್ಗೆ ಪ್ರಸ್ತಾಪವಿದ್ದು ಇಲಾಖೆಗೆ ಪ್ರತಿ ವರ್ಷ ಸಾಕ್ಷ್ಯ ಚಿತ್ರ ನಿರ್ಮಾಣಕ್ಕೆ ಒದಗಿಸುವ ಹಣ ಬಹಳ ಅಲ್ಪವಿದ್ದು ಈಗಾಗಲೇ ಇಲಾಖೆಯವರು ನಿಯೋಜಿಸಲಾದ ಕಾರ್ಯಕ್ರಮದಂತೆ ಈ ಸಾಕ್ಷ ಚಿತ್ರವನ್ನು ನಿರ್ಮಿಸಲು ಸಾಧ್ಯವಾಗಲಿಲ್ಲ. ೧೯೮೬-೮೭ನೇ ಸಾಲಿನ ಸಾಕ್ಷ್ಯ ಚಿತ್ರ ನಿರ್ಮಾಣದಲ್ಲಿಯಾ ಸಹ ಇದನ್ನು ಕೈಗೆತ್ತಿಕೊಳ್ಳಲಾಗಲಿಲ್ಲ. ಇವರ ಸಾಕ್ಷ ಚಿತ್ರವನ್ನು ಮುಂದಿನ ಸಾಲಿನ ಕಾರ್ಯಕ್ರಮದಲ್ಲಿ ಪರಿಗಣಿಸಲಾಗುವುದು.

## ೩) ಏತ ನೀರಾವರಿ ಯೋಜನೆಗಳಿಗೆ ವಿದ್ಯುಚ್ಛಕ್ತಿ ಒದಗಿಸುವುದನ್ನು ಬಂದ್ ಮಾಡಿರುವುದು

ಶ್ರೀ ಕೆ.ಬಿ. ಕೋಳಿವಾಡ (ರಾಣೆಬೆನ್ನೂರು).—ಮಾನ್ಯ ಉಪಾಧ್ಯಕ್ಷರೇ, ರಾಜ್ಯದಲ್ಲಿ ನೀರಾವರಿ ಖಾತೆಯಿಂದ ಯಾತ ನೀರಾವರಿ ಯೋಜನೆಗಳ ವಿದ್ಯುತ್-ಬಾಕಿಯನ್ನು ತುಂಬದೇ ಇರುವುದರಿಂದ ವಿದ್ಯುತ್-ಖಾತೆಯವರು ಎಲ್ಲಾ ಯಾತ-ನೀರಾವರಿ ಯೋಜನೆಗಳಿಗೆ ವಿದ್ಯುತ್‌ನ್ನು ಬಂದು ಮಾಡಿರುವುದು ಸರಕಾರದ ದೀವಾಳಿಖೋರತನವನ್ನು ಎತ್ತಿ ತೋರಿಸುವುದಲ್ಲದೆ, ಕೃಷಿಕರಿಗೆ ಅಪಾರವಾದ ನಷ್ಟವಾಗಿದ್ದು. ಧಾರವಾಡ ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿನಲ್ಲಿ ಎಲ್ಲ ಯಾತ-ನೀರಾವರಿ ಯೋಜನೆಗಳ ಪಂಪುಸೆಟ್ಟುಗಳಿಗೆ ವಿದ್ಯುತ್ ಸರಬರಾಜನ್ನು ಈಗ ೧೫ ದಿವಸಗಳ ಹಿಂದೆಯೇ ನಿಲ್ಲಿಸಿರುವುದರಿಂದ ರೈತರು ಬೀಜ ಗೊಬ್ಬರಗಳಿಗೆ ಖರ್ಚು ಮಾಡಿ ಬೆಳೆಸಿದ ಪೈರುಗಳು ಒಣಗಿ ನಾಶವಾಗುವ ಹಂತದಲ್ಲಿವೆ. ಅಲ್ಲದೆ ಬಡ ರೈತರಿಗೆ ಕೋಟ್ಯಾಂತರ ರೂಪಾಯಿಗಳ ಹಾನಿಯಾಗುತ್ತದೆ. ಆದ್ದರಿಂದ ನೀರಾವರಿ ಮಂತ್ರಿಗಳು ತಕ್ಷಣ ಎಲ್ಲಾ ಯಾತ ನೀರಾವರಿ ಯೋಜನೆಗಳನ್ನು, ಪಂಪುಸೆಟ್ಟುಗಳಿಗೆ ವಿದ್ಯುತ್ ಸರಬರಾಜು ದೊರೆಯುವಂತೆ ಮಾಡಿ ರೈತರ ಕಷ್ಟ ನಿವಾರಣೆಯನ್ನು ಮಾಡುವಿರೆಂಬ ವಿಶ್ವಾಸದಿಂದ ಈ ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಉಪಾಧ್ಯಕ್ಷರೇ, ನೀರಾವರಿ ಮಂತ್ರಿಗಳು ಸದನದಲ್ಲಿ ಇಲ್ಲ. ಅವರಿಂದ ಸರಿಯಾದಂಥ ಉತ್ತರವನ್ನು ಸನ್ಮಾನ್ಯ ಕೋಳಿವಾಡ್‌ರವರಿಗೆ ತರಿಸಿಕೊಡುತ್ತೇನೆ.

(ಅಧ್ಯಕ್ಷರು, ಆಧ್ಯಕ್ಷಪೀಠವನ್ನಲಂಕರಿಸಿದರು)

ಶ್ರೀ ಕೆ.ಬಿ. ಕೋಳಿವಾಡ್.—ಇದು ಬಡ ರೈತರ ಪ್ರಶ್ನೆ. ರೈತರುಗಳು ಬಹಳ ಕಷ್ಟದಲ್ಲಿ ಇದ್ದಾರೆ, ಆದ್ದರಿಂದ ತಕ್ಷಣ ನಮಗೆ ಉತ್ತರ ಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಬೇಗ ಕೊಡಿಸುತ್ತೇನೆ.

ಶ್ರೀ ಕೆ.ಬಿ. ಕೋಳಿವಾಡ್.—ಎಲೆಕ್ಟ್ರಿಸಿಟಿ ಕೊಡಿಸಿದರೆ ಸಾಕು.

ಶ್ರೀ ಎ. ಲಕ್ಷ್ಮೀಸಾಗರ್.—ಆಯಿತು, ಆಯಿತು.

## ೪) ಕೊಳ್ಳೇಗಾಲ ತಾಲ್ಲೂಕಿನಲ್ಲಿ ಆನೆಗಳಿಂದ ಬೆಳೆಗಳಿಗೆ ಹಾನಿ

ಶ್ರೀ ಜಿ. ರಾಜುಗೌಡ.—ಮಾನ್ಯ ಅಧ್ಯಕ್ಷರೇ, ಕೊಳ್ಳೇಗಾಲ ತಾಲ್ಲೂಕಿನಲ್ಲಿ ಸುಮಾರು ಹತ್ತಾರು ಸ್ಥಳಗಳಲ್ಲಿ ರೈತರುಗಳು ತಮ್ಮ ಪಟ್ಟಾ ಜಮೀನಿನಲ್ಲಿ ಬೆಳೆದಿದ್ದ ತೆಂಗು, ಕಬ್ಬು, ಅರಿಷಿನ, ಭತ್ತ ರಾಗಿ, ಅವರೆ, ಜೋಳ, ಮತ್ತು ಇತರ ಬೆಳೆಗಳನ್ನು ಆನೆಗಳ ಹಿಂಡುಗಳು ಬಂದು ನಾಶಮಾಡಿ ರೈತರ ವರ್ಷವಿಡೀ ದಿನನಿತ್ಯದ ಕೂಳಿಗೂ ಗತಿ ಇಲ್ಲದಂತಾಗಿರುವುದನ್ನು ಸರ್ಕಾರದ ಗಮನಕ್ಕೆ ಅನೇಕ ಬಾರಿ ಮನವಿಗಳ ಮುಖಾಂತರ ತಂದಿದ್ದರೂ. ಇದುವರೆವಿಗೂ ಇದರ ಬಗ್ಗೆ ಏನು ಕಾರ್ಯಕ್ರಮ ಕೈಗೊಳ್ಳದೆ ಯಾವ ವಿಧವಾದ ಪರಿಹಾರವನ್ನು ಕೊಡಲು ಸರ್ಕಾರ ಮುಂದೆ ಬಾರದಿರುವುದರಿಂದ, ಸಂಬಂಧಪಟ್ಟ ರೈತರುಗಳು ನಿರಾಶಾದಾಯಕವಾಗಿ, ತಲೆಯ ಮೇಲೆ ಕೈಹೊತ್ತು, ಚಿಂತಾಕ್ರಾಂತರಾಗಿದ್ದಾರೆ. ಇದರ ಬಗ್ಗೆ ಸರ್ಕಾರದ ಪ್ರತಿಕ್ರಿಯೆ ಏನು ? ರೈತರುಗಳಿಗೆ ನಾಶವಾಗಿರುವ ಬೆಳೆಯ ಪೌಲ್ಯವನ್ನು ಪರಿಹಾರ ರೂಪದಲ್ಲಿ ಕೊಟ್ಟು, ಅಂಥವರಿಗೆ ರಿಯಾಯಿತಿ ಬಡ್ಡಿ ದರದಲ್ಲಿ ಸಾಲವನ್ನು

ಮಂಜೂರು ಮಾಡಿ, ಮುಂದಿನ ಬೆಳೆ ಇಡಲು ಆತನಿಗೆ ಎಲ್ಲಾ ವಿಧವಾದ ಸಹಾಯವನ್ನು ಕೊಡಲು ಈ ಸದನದ ಮೂಲಕ ನೊಂದಿರುವ ರೈತರಿಗೆ ಸರ್ಕಾರ ಭರವಸೆ ಕೊಡಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಜೆ.ಎಸ್. ದೇಶ್‌ಮುಖ್.—ಈ ಪ್ರಶ್ನೆಗೆ ಸೂಕ್ತ ಉತ್ತರ ಇಲ್ಲ. ವಿಚಾರಿಸಿ ಉತ್ತರವನ್ನು ಕೊಡುತ್ತೇನೆ.

## ೫) ಮಲೆನಾಡು ಭಾಗಗಳಲ್ಲಿ ಸೌದೆಗೆ ವಿಭಿನ್ನ ರೀತಿಯ ಬೆಲೆ ಆರಣ್ಯ ಇಲಾಖೆಯವರು ನಿಗದಿಪಡಿಸಿರುವುದು

ಶ್ರೀ ಬಿ. ಧರ್ಮಪ್ಪ.—ಮಾನ್ಯ ಅಧ್ಯಕ್ಷರೇ, ಸಿದ್ದಾಪುರ ಮತ್ತು ಸಾಗರ ತಾಲ್ಲೂಕುಗಳು ಅಕ್ಕ ಪಕ್ಕದವುಗಳಾಗಿದ್ದು ಎರಡೂ ತಾಲ್ಲೂಕುಗಳೂ ಸಮನಾದ ಮಲೆನಾಡಾಗಿದ್ದು ಕಾಡೂ ಸಹ ಸಮನಾಗಿರುತ್ತೆ. ಹೀಗಿದ್ದೂ ಸಹ ಆರಣ್ಯ ಇಲಾಖೆಯವರು ಸಿದ್ದಾಪುರ ತಾಲ್ಲೂಕಿನಲ್ಲಿ ಸೌದೆಗೆ ಟನ್ ಒಂದಕ್ಕೆ ೮೦ (ಎಂಬತ್ತು ರೂಪಾಯಿಗಳು), ಅದೇ ರೀತಿ ಸಾಗರದಲ್ಲಿ ೧೬೦ ರೂಪಾಯಿಗಳಂತೆಯೂ ಸರ್ಕಾರಿ ಡಿಪೋಗಳಲ್ಲಿ ಮಾರಾಟ ಮಾಡಲ್ಪಡುತ್ತೆ. ಈ ರೀತಿ ಒಂದೇ ಸಮನಾದ ಮಲೆನಾಡು ಭಾಗಗಳಲ್ಲಿ ಎರಡು ರೀತಿಯ ಬೆಲೆ ನಿರ್ಧಾರ ಮಾಡಿರುವ ಕಾರಣವೇನು ? ಮತ್ತು ಈ ರೀತಿಯ ತಾರತಮ್ಯ ಮಾಡಿರುವುದನ್ನು ಸರಿಪಡಿಸಿ ಸಾಗರದಲ್ಲೂ ಸಿದ್ದಾಪುರ ತಾಲ್ಲೂಕಿನಂತೆಯೇ ಟನ್ ಒಂದಕ್ಕೆ ೮೦ ರೂಪಾಯಿಗಳಂತೆ ಸೌದೆಯನ್ನು ಮಾರಾಟ ಮಾಡಲು ಕ್ರಮ ತೆಗೆದುಕೊಳ್ಳಬೇಕಾಗಿ ಸಂಬಂಧಪಟ್ಟ ಆರಣ್ಯ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಜೆ.ಎಸ್. ದೇಶ್‌ಮುಖ್.—ಮಾನ್ಯ ಅಧ್ಯಕ್ಷರೇ, ಈ ವಿವರ ನನ್ನ ಕಡೆ ಇಲ್ಲ. ಕ್ರಮ ವನ್ನು ತೆಗೆದುಕೊಂಡು ಉತ್ತರ ಕೊಡುತ್ತೇನೆ.

## ೬) ಉಳ್ಳಾಲದ ಬೆಂಗರೆಯಂ ನಾಗರೀಕರಿಗೆ ಮತದಾನದ ಹಕ್ಕು ಕೊಡುವ ಬಗ್ಗೆ

ಶ್ರೀ ಬಿ.ಎಂ. ಇದ್ದಿನಬ್ಬ.—ಮಾನ್ಯ ಅಧ್ಯಕ್ಷರೇ, ಉಳ್ಳಾಲ ಕ್ಷೇತ್ರಕ್ಕೆ ಒಳಪಟ್ಟ ಬೆಂಗರೆ ಸುಮಾರು ಮೂರು ಸಾವಿರಕ್ಕೂ ಮಿಕ್ಕಿ ಜನ ಸಂಖ್ಯೆಯಿರುವ ಪ್ರದೇಶ. ಮಂಗಳೂರು ಬಂದರಿನ ಗುರುಪುರ ನದಿಯ ಆಚೆ ಭಾಗದ ಈ ಪ್ರದೇಶದಲ್ಲಿ ಮೀನುಗಾರರೂ, ಅಲ್ಪಸಂಖ್ಯಾತ ಮುಸ್ಲಿಮರೂ ವಾಸವಾಗಿರುತ್ತಾರೆ. ಈ ಪ್ರದೇಶದವರಿಗೆ ಲೋಕಸಭೆ ಮತ್ತು ವಿಧಾನಸಭೆಯ ಚುನಾವಣೆಗಳಲ್ಲಿ ಮಾತ್ರ ಮತದಾನದ ಹಕ್ಕು ಇದೆ. ಇವರಿಗೆ ತಾಲ್ಲೂಕು ಬೋರ್ಡ್, ಪಂಚಾಯತ್‌ಗಳಲ್ಲಿ ಮತದಾನದ ಹಕ್ಕು ಇಲ್ಲ. ಇಲ್ಲಿ ಆದಿಯಿಂದಲೇ ಪಂಚಾಯತ್ ಇಲ್ಲ. ಈಚೆಗೆ ಜರಗಿದ ಜಿಲ್ಲಾ ಪರಿಷತ್ತಿಗೂ ಮಂಡಲ ಪಂಚಾಯಿತಿಗೂ ಇವರಿಗೆ ಮತದಾನದ ಹಕ್ಕು ಇರಲಿಲ್ಲ. ಹೀಗೆ, ಯಾವುದಕ್ಕೂ ಒಳಪಡದೆ ಇರುವುದರಿಂದ ಇಲ್ಲಿನ ಜನರ ಅಭಿವೃದ್ಧಿಗೆ ಭಾರೀ ತೊಂದರೆ ಒದಗಿರುತ್ತದೆ. ಇವರು ತ್ರಿಶಂಕುವಿನಲ್ಲಿ ಕಷ್ಟಪಡುತ್ತಿದ್ದಾರೆ. ಇವರ ಅಭಿವೃದ್ಧಿಗಾಗಿ ಮತ್ತು ಆ ಪ್ರದೇಶದ ಪ್ರಗತಿಗಾಗಿ ಈ ಪ್ರದೇಶವನ್ನು ಮಂಗಳೂರು ಪೂರ್ವಕ್ಕೆ ಸೇರಿಸಬಹುದು, ಇಲ್ಲವೇ ಪುರಸಭೆಯಾಗಿ ಪಂಚಾಯತ್ ಮಾಡಬಹುದು. ಇದು ಅತೀ ಅಗತ್ಯದ ಸಂಗತಿ, ಇಲ್ಲಿನ ಜನರು ದುಃಖಿತರಾಗಿರುತ್ತಾರೆಂದು ತಿಳಿಸಿ ಈ ಕುರಿತು ನಗರಾಭಿವೃದ್ಧಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ನಗರ ಪ್ರದೇಶದ ಹೊರವಲಯದಲ್ಲಿ ಇರುವವರು ಜಿಲ್ಲಾ ಪರಿಷತ್ತಿಗೂ ಮತದಾನ ಮಾಡುವ ಅಧಿಕಾರ ಇಲ್ಲವಾಗಿದೆ. ಕಾರ್ಪೋರೇಷನ್ ಚುನಾವಣೆಯಲ್ಲೂ ಮತದಾನ ಮಾಡುವ ಅಧಿಕಾರ ಇಲ್ಲವಾಗಿದೆ. ಇದರ ಬಗ್ಗೆ ಪರಿಶೀಲನೆ ಮಾಡಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಆಶ್ವಾಸನೆ ಕೊಡುತ್ತೇನೆ.

## (೭) ಕರ್ನಾಟಕದಲ್ಲಿ ಸ್ಟೀಲ್ ರೀರೋಲಿಂಗ್ ಪ್ಲಾಂಟನ್ನು ಮಂಜೂರು ಮಾಡುವ ಬಗ್ಗೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಕರ್ನಾಟಕದಲ್ಲಿ ದಿನಾಂಕ ೨೫ನೇ ಜೂನವರಿ ೧೯೮೭ರ ವರೆಗೆ ಸ್ಟೀಲ್ ರೀರೋಲಿಂಗ್ ಪ್ಲಾಂಟ್‌ಗಳ ಸಂಖ್ಯೆ ಹಾಗೂ ಮಾಲೀಕರುಗಳ ಹೆಸರುಗಳ ವಿವರವನ್ನು ಸದನಕ್ಕೆ ಕೊಡುವಂತೆ ಒತ್ತಾಯಿಸುತ್ತೇನೆ. ಕೇಂದ್ರ ಸರಕಾರದ ಸ್ಟೀಲ್ ರೀರೋಲಿಂಗ್ ಪ್ಲಾಂಟ್‌ಗಳ